# ಅಮೃತ ವಚನಗಳು

## ಸ್ವಾಮಿ ಭೂತೇಶಾನಂದಜಿಯವರೊಂದಿಗೆ ಸಂಭಾಷಣೆ

**ಕನ್ನಡಕ್ಕೆ :** ಸ್ವಾಮಿ ಮಂಗಳಾತ್ಮಾನಂದ



ರಾಮಕೃಷ್ಣ ಮಹಾಸಂಘದ ೧೨ನೇ ಪರಮಾಧ್ಯಕ್ಷರಾಗಿದ್ದ ಶ್ರೀಮತ್ ಸ್ವಾಮಿ ಭೂತೇಶಾನಂದಜಿಯವರು ಅನೇಕ ಮಂದಿ ಸಂನ್ಯಾಸಿಗಳ ಹಾಗೂ ಭಕ್ತರ ಆಧ್ಯಾತ್ಮಿಕ ಪ್ರಶ್ನೆಗಳಿಗೆ ಶಾಸ್ತ್ರಗಳ ಆಧಾರದಿಂದಲೂ ತಮ್ಮ ಆಧ್ಯಾತ್ಮಿಕ ಜೀವನ, ಅನುಭವಗಳ ಹಿನ್ನೆಲೆಯಿಂದಲೂ ಉತ್ತರ ನೀಡುತ್ತಿದ್ದರು. ಹೀಗೆ ನಡೆದ ಆಧ್ಯಾತ್ಮಿಕ ಪ್ರಶ್ನೋತ್ತರಗಳ ಟಿಪ್ಪಣಿಗಳನ್ನು ಭಕ್ತೆಯೊಬ್ಬರು ಬರೆದಿಟ್ಟಿದ್ದು, ಮುಂದೆ ಅದನ್ನು ಭಕ್ತರುಗಳ ಅನುಕೂಲಕ್ಕಾಗಿ ಪ್ರಕಟಿಸಿದರು. ಈ ಕೃತಿ ಬಂಗಾಳಿಯಲ್ಲಿ **‘ಅಮೃತಕಥಾ’** ಎಂಬ ಹೆಸರಿನಲ್ಲಿ ಪ್ರಕಟವಾಗಿದೆ. ಇದರ ಕನ್ನಡಾನುವಾದ ಇಲ್ಲಿದೆ. ಅನುವಾದಕರು ವಾರಾಣಸಿಯ ರಾಮಕೃಷ್ಣ ಸೇವಾಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಈ ಪತ್ರಿಕೆಯಲ್ಲಿ ಅನೇಕ ಲೇಖನಗಳನ್ನು ಬರೆದಿರುವ ಅವರು ಹಲವು ಸಾಹಿತ್ಯಿಕ ಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ.

**ಪ್ರಶ್ನೆ:** ಮಹಾರಾಜ್, ಸಾಧನೆಯ ಬಗ್ಗೆ ನಮಗೆ ಏನಾದರೂ ಹೇಳಿ.

**ಉತ್ತರ:** ಸಾಧನೆಯ ಬಗ್ಗೆ ಹೇಳುವುದಾದರೆ – ಭಗವಂತನ ಗುಣಗಾನ, ಆತನು ಹೇಳಿದ ಹಾಗೆ ಜೀವನ ನಡೆಸುವುದು, ಸದ್ಗ್ರಂಥಗಳ ಅಧ್ಯಯನ, ಭಗವದ್ಭಕ್ತರ ಸಂಗ ಇತ್ಯಾದಿ. ಇವುಗಳಲ್ಲಿ ಯಾವುದಾದರೂ ಒಂದನ್ನು ನಿಷ್ಠೆಯಿಂದ ಆಚರಿಸಿದರೂ ಕೂಡ ಬಹಳಷ್ಟು ಪ್ರಯೋಜನ ಸಿಗುತ್ತದೆ. ಇವುಗಳ ಜೊತೆ ಜಪ-ಧ್ಯಾನಗಳನ್ನು ಮಾಡಲೇಬೇಕು. ಶಾಸ್ತ್ರಗಳಲ್ಲಿ ಹೇಳಿದ ಸ್ಥಿತಪ್ರಜ್ಞನ ಲಕ್ಷಣಗಳನ್ನು ಅನುಭವಿಸಬೇಕಾದರೆ ಸಾಧನೆ ಒಂದೇ ದಾರಿ. ಭಗವತ್ ಚಿಂತನೆ ಮಾಡುತ್ತಾ ಮಾಡುತ್ತಾ ಮನುಷ್ಯನು ಭಗವಂತನೇ ಆಗುತ್ತಾನೆ.

ಶಂಕರಾಚಾರ್ಯರ ಗೀತಾಭಾಷ್ಯದಲ್ಲಿದೆ – ಅಧ್ಯಾತ್ಮ ಶಾಸ್ತ್ರಗಳಲ್ಲೆಲ್ಲ ವಸ್ತುಲಾಭವು ವ್ಯಕ್ತಿಯ ಗುಣಗಳಿಂದ ಬರುತ್ತದ. ಇಲ್ಲಿ ಆಧ್ಯಾತ್ಮಿಕ ಸಾಧಕರಿಗೆ ಅನುಶಾಸನ ಮಾಡಲಾಗಿದೆ. ಆಧ್ಯಾತ್ಮಿಕ ವೈಶಿಷ್ಟ್ಯಗಳು ಪ್ರಯತ್ನದ ಫಲಸ್ವರೂಪ. ಶಂಕರಾಚಾರ್ಯರು ಹೇಳುತ್ತಾರೆ: ‘‘**ಸರ್ವತ್ರ ಏವ ಹಿ ಅಧ್ಯಾತ್ಮಶಾಸ್ತ್ರೇ ಕೃತಾರ್ಥಲಕ್ಷಣಾನಿ, ಯಾನಿ ತಾನಿ ಏವ ಸಾಧನಾನಿ ಉಪದಿಶ್ಯಂತೇ ಯತ್ನಸಾಧ್ಯತ್ವಾತ್ । ಯಾನಿ ಯತ್ನಸಾಧ್ಯಾನಿ ಲಕ್ಷಣಾನಿ ಚ ಭವಂತಿ ತಾನಿ**’’ *(ಗೀತಾ ಶಾಂಕರಭಾಷ್ಯ ೨.೫೪)*

**ಪ್ರಶ್ನೆ:** ಜಪಧ್ಯಾನ ಮಾಡುವುದಕ್ಕೆ ಸಾಧನೆ ಎನ್ನುವರೆ ?

**ಉತ್ತರ:** ಹೌದು, ಹಾಗೆಂದು ಹೇಳಬಹುದು. ಜಪಧ್ಯಾನಗಳು, ಸತ್ಯಸಂಕಲ್ಪನಾಗುವುದು, ಯಾರಿಗೂ ವಂಚನೆ ಮಾಡದಿರುವುದು, ಇಂದ್ರಿಯಗಳ ನಿಯಂತ್ರಣ, ವಿಲಾಸಮಯ ಜೀವನ ವರ್ಜಿಸುವುದು, ಸದಾ ಭಕ್ತಿಯನ್ನು ಬೆಳೆಸುವುದು – ಇವುಗಳೆಲ್ಲ ಸಾಧನೆಗಳು.

**ಪ್ರಶ್ನೆ:** ಸಾಧನೆಯಿಂದ ಉಪಯೋಗವೇನು?

**ಉತ್ತರ:** ಸಾಧನೆಯೆಂದರೆ ಅಭ್ಯಾಸ. ಯಾವುದಾದರೂ ಒಂದು ಆದರ್ಶವನ್ನು ಗುರಿಯಾಗಿಟ್ಟುಕೊಂಡು, ಆ ಸ್ಥಾನವನ್ನು ಸೇರಲು ಪ್ರಯತ್ನ ಮಾಡುವುದೇ ಸಾಧನೆ. ಸಂಗೀತ ವಿದ್ಯೆಯನ್ನು ಅಭ್ಯಾಸ ಮಾಡಿ ಸಂಗೀತಜ್ಞನಾಗುವುದು, ಗರಡಿ ಸಾಧನೆ ಮಾಡಿ ಶಕ್ತಿವಂತನಾಗುವುದು, ಅದೇ ರೀತಿ ಭಗವಂತನ ಸಿದ್ಧಿಗಾಗಿ ಸಾಧನೆ ಮಾಡಿದರೆ ಈಶ್ವರ ಲಾಭವಾಗುತ್ತದೆ. ಜಗತ್ತಿನಲ್ಲಿ ಶ್ರೇಷ್ಠವಾದ ಸಾಧನೆ ಎಂದರೆ ಭಗವತ್‌ಪ್ರಾಪ್ತಿಯ ಸಾಧನೆ. ನಾವು ಜೀವನದಲ್ಲಿ ಒಂದು ಗುರಿ ಅಥವಾ ಉದ್ದೇಶವನ್ನು ಪ್ರಾರಂಭದಲ್ಲಿಯೇ ದೃಢಪಡಿಸಬೇಕು. ಭಗವತ್ ಸಿದ್ಧಿಯೇ ನಮ್ಮ ಗುರಿಯಾಗಿದ್ದರೆ ಸಾಧನೆ ಮಾಡದೆ ಬೇರೆ ಉಪಾಯವೇ ಇಲ್ಲ. ಸಾಧನೆ ಮಾಡದಿದ್ದರೆ ಮನಸ್ಸಿನಲ್ಲಿ ಆಧ್ಯಾತ್ಮಿಕ ಲಾಭವಾಗುವುದಿಲ್ಲ. ನಿರಂತರ ಭಗವಂತನ ಕುರಿತು ಸಾಧನೆ ಮಾಡುತ್ತ ಮಾಡುತ್ತ – ಸಾಧಕನು ಭಗವಂತನ ಹಾಗೆ ಶುದ್ಧನಾಗುತ್ತಾನೆ, ಅವನ ಹಾಗೆ ಪವಿತ್ರನಾಗುತ್ತಾನೆ. ಜೊತೆಗೆ ಸಾಧಕನಲ್ಲಿ ಭಗವಂತನ ‘ಸತ್ತಾ’ (ಇರುವಿಕೆ) ಪ್ರಕಾಶಕ್ಕೆ ಬರುತ್ತದೆ. ಬಂಗಾರಕ್ಕೆ ಕಿಲುಬು ಹಿಡಿದರೆ ಅದು ಚಿನ್ನವೆಂದು ಗುರುತಿಸುವುದು ಕಷ್ಟ. ಅದನ್ನು ತೊಳೆದರೆ ಚಿನ್ನವು ಹೊಳೆಯುತ್ತದೆ. ಹಾಗೆಯೇ ಮನುಷ್ಯರು ಮನಸ್ಸಿನ ಕೊಳೆಯನ್ನು ತೊಳೆಯುತ್ತಿದ್ದರೆ, ಭಗವಂತನ ದೇವತ್ವವು ಮನುಷ್ಯನಲ್ಲಿ ಜಾಗೃತವಾಗುತ್ತದೆ. ಯಾರು ಗುರಿಯನ್ನು ದೃಢವಾಗಿಟ್ಟುಕೊಂಡು ಆದರ್ಶಪ್ರಾಪ್ತಿಗಾಗಿ ಸಾಧನೆ ಮಾಡುತ್ತಾನೋ, ಆತನಿಗೆ ಸಾಧನೆಯ ಫಲ ಸಿಕ್ಕೇ ಸಿಗುತ್ತದೆ. ಗುರಿ ಸೇರ ಬೇಕಾದರೆ ವ್ಯಕ್ತಿಯು ತನ್ನ ಇಡೀ ಜೀವನವನ್ನೇ ಅದಕ್ಕಾಗಿ ಮುಡಿಪಾಗಿಡಬೇಕು.

**ಪ್ರಶ್ನೆ:** ಸಾಧನೆಗೆ ತಿತಿಕ್ಷೆಯ ಪ್ರಯೋಜನವುಂಟೆ?

**ಉತ್ತರ:** ತಿತಿಕ್ಷೆಗೆ ಅಷ್ಟೊಂದು ಮಹತ್ವ ಕೊಡಬೇಕಾಗಿಲ್ಲ – ಅದೊಂದು ದಾರಿ ಮಾತ್ರ, ಗುರಿಯಲ್ಲ. ಇಲ್ಲಿ ಉದ್ದೇಶವೇನು – ಮನಸ್ಸು ವಿಚಲಿತವಾಗದ ಹಾಗೆ ನೋಡಿಕೊಂಡು, ಸರ್ವದಾ ಈಶ್ವರನನ್ನು ಮನಸ್ಸಿನಲ್ಲಿಡುವುದು. ತಿತಿಕ್ಷೆಯಲ್ಲಿ ಎರಡು ವಿಧಗಳಿವೆ. ಮೊದಲನೆಯದು – ಸುಖದುಃಖಗಳನ್ನು ಸಹಿಸಿ, ಮನಸ್ಸು ವಿಕ್ಷಿಪ್ತಗೊಳ್ಳದ ಹಾಗೆ ಮಾಡುವುದು. ಪ್ರಾರಂಭದ ಸಾಧನ ಕಾಲದಲ್ಲಿ ಈ ತಿತಿಕ್ಷೆಯ ಆವಶ್ಯಕತೆ ಇದೆ. ಎರಡನೆಯದು, ತಿತಿಕ್ಷೆಯಿಂದ ಅನೇಕರು ಲೋಕಪ್ರಿಯರಾಗಲು ಹವಣಿಸುತ್ತಾರೆ. ಇಲ್ಲಿ ತಿತಿಕ್ಷೆಯನ್ನು ಕೆಟ್ಟದಾರಿಯಲ್ಲಿ ಮಾನ–ಸನ್ಮಾನ, ಕೀರ್ತಿ ಲಾಭವಾಗಲು ಉಪಯೋಗಿಸುತ್ತಾರೆ. ಹಾಗಾಗಿ ಉತ್ತಮ ಸಾಧಕರು ಬಾಹ್ಯವಾಗಿ ತೋರಿಸದೆ ರಹಸ್ಯವಾಗಿ ತಿತಿಕ್ಷೆ ಯನ್ನು ಅಭ್ಯಾಸ ಮಾಡುತ್ತಾರೆ. ಜನಸಾಮಾನ್ಯರಿಗೆ ಇದು ನೋಡಲು ಸಿಗುವುದಿಲ್ಲ.

ನಾನು ಉತ್ತರಕಾಶಿಯಲ್ಲಿದ್ದಾಗ ಅಲ್ಲೊಬ್ಬ ಸಾಧುಗಳಿದ್ದರು. ಎಲ್ಲ ಸಾಧುಗಳೂ ಅವರನ್ನು ಕಂಡರೆ ಬಹಳ ಭಕ್ತಿ ಗೌರವ ತೋರಿಸು ತ್ತಿದ್ದರು. ಆ ಸಾಧುವಿನ ಸಂಪತ್ತೆಂದರೆ ಒಂದೇ ಒಂದು ಚಾದರಾ (ಹೊದಿಕೆ), ಇನ್ನೇನೂ ಇರಲಿಲ್ಲ. ಅವರು ಆ ಹೊದಿಕೆಯನ್ನು ಸ್ವಚ್ಛವಾಗಿಟ್ಟುಕೊಂಡು ದೇಹಪೂರ್ತಿ ಹೊದ್ದುಕೊಳ್ಳುತ್ತಿದ್ದರು. ಒಂದು ದಿನ ಅಲ್ಲಿಗೆ ಒಬ್ಬ ಹೊಸ ಸಾಧು ಬಂದು ವಾಸಿಸಲು ಯೋಗ್ಯ ವಾದ ಕುಟೀರದ ಬಗ್ಗೆ ಇವರ ಬಳಿ ಮಾಹಿತಿ ಕೇಳಿದರು. ಈ ಸಾಧುಗಳು ಹೊಸ ಸಾಧುಗಳಿಗೆ ತನ್ನ ಕುಟೀರವನ್ನೇ ತೋರಿಸಿ, ಗ್ರಾಮದ ಕಡೆ ತೆರಳಿದರು. ಆ ಕುಟೀರದೊಳಗೆ ಯಾವುದೇ ವಸ್ತುಗಳಿರಲಿಲ್ಲ. ಆದ್ದರಿಂದ ಆ ಕುಟೀರವು ಬೇರೆಯವರಿಗೆ ಸೇರಿದ್ದೆಂದು ಈ ಹೊಸ ಸಾಧುಗಳಿಗೆ ಗೊತ್ತಾಗಲೇ ಇಲ್ಲ. ಉತ್ತಮ ಸಾಧುವಾದುದರಿಂದ ಅವರ ತಿತಿಕ್ಷೆ ಪ್ರಕಾಶಕ್ಕೆ ಬಂದಿರಲಿಲ್ಲ.

ಸ್ವಾಮಿ ವಿವೇಕಾನಂದರು ತಮ್ಮ ಅಮರನಾಥಯಾತ್ರೆಯ ಸಮಯದಲ್ಲಿ ಕಾಶ್ಮೀರದಲ್ಲಿ ತಂಗಿದ್ದರು. ಅಲ್ಲಿ ಇತರ ಸಾಧುಗಳು ಬರಿ ಮೈಯಲ್ಲಿ ಯಾತ್ರೆಗೆ ಹೋಗುವುದನ್ನು ನೋಡಿ, ಸ್ವಾಮೀಜಿ ಹೇಳಿದ್ದರು – 'ಇದು ಬರೀ ದೇಹಕ್ಕೆ ಕಷ್ಟ ಕೊಡುವುದು'. ಅನಂತರ ಅವರೇ ಹೇಳಿದ್ದರು, ತಿತಿಕ್ಷೆಯಿಂದಲೂ ಸಾಧನೆಗೆ ಉಪಕಾರವಿದೆ ಎಂದು. ತಿತಿಕ್ಷೆ ಇಲ್ಲದಿದ್ದರೆ ವಿಲಾಸ ಜೀವನ, ಸ್ವಚ್ಛಂದತೆ ಬಂದು ಸಾಧಕರ ಜೀವನವನ್ನು ತಿಂದುಬಿಡುತ್ತದೆ. ಅತಿಯಾದ ತಿತಿಕ್ಷೆಯನ್ನು ಗೀತೆಯಲ್ಲಿ ನಿಂದಿಸಲಾಗಿದೆ.

ಚೆನ್ನೈ ರಾಮಕೃಷ್ಣ ಮಠದ ಬಳಿ ಒಂದು ದೇವಸ್ಥಾನವಿದೆ. ಅಲ್ಲೊಬ್ಬ ಸಾಧು ವಾಸಿಸುತ್ತಿದ್ದರು. ಆ ಸಾಧು ಶೌಚಾದಿ ಕ್ರಿಯೆಗಳಿಗಷ್ಟೆ ಹೊರಗೆ ಹೋಗುತ್ತಿದ್ದರು, ಉಳಿದ ಸಮಯ ಅಲ್ಲಿಯೇ ಕುಳಿತುಕೊಳ್ಳುತ್ತಿದ್ದರು. ಭಕ್ತರು ಅಲ್ಲಿಗೇ ಊಟ ತಿಂಡಿ ತಂದುಕೊಡುತ್ತಿದ್ದರು. ಸಾಧುಗಳು ಅಲ್ಲಿಯೇ ಊಟ ತಿಂಡಿ ಮಾಡುತ್ತಿದ್ದರು. ಅವರ ದೇಹವಿಡೀ ಹುಣ್ಣಾಗಿದ್ದವು. ಒಂದು ಸಲ ನಮ್ಮ ಮದ್ರಾಸ್ ಮಠದಿಂದ, ಅವರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಬೇಕೆಂದು, ಅವರನ್ನು ನಮ್ಮ ಆಸ್ಪತ್ರೆಗೆ ಕರೆತರಲು ವ್ಯವಸ್ಥೆಯಾಯಿತು. ಆದರೆ ಆ ಸಾಧುಗಳು ಆ ದೇವಸ್ಥಾನ ಬಿಟ್ಟು ಹೊರಬರಲು ತಯಾರಿರಲಿಲ್ಲ. ಇದೂ ಕೂಡ ತಿತಿಕ್ಷೆ.

**ಪ್ರಶ್ನೆ:** ಸಾಧಕನು ಸರಿಯಾದ ಮಾರ್ಗದಲ್ಲಿ ಮುಂದುವರಿಯುತ್ತಿದ್ದಾನೆಂದು ತಿಳಿಯಲು ಚಿಹ್ನೆಗಳೇನು?

**ಉತ್ತರ:** ಭಾಗವತದಲ್ಲಿ ಇದರ ಬಗ್ಗೆ ಹೀಗೆ ಹೇಳಿದೆ:

> **ಮಯ್ಯರ್ಪಿತಾತ್ಮನಃ ಸಭ್ಯ ನಿರಪೇಕ್ಷಸ್ಯ ಸರ್ವತಃ ।**
> **ಮಯಾಽತ್ಮನಾ ಸುಖಂ ಯತ್ ತತ್ ಕುತಃ ಸ್ಯಾದ್ವಿಷಯಾತ್ಮನಾಮ್ ॥** *(ಉದ್ಧವಗೀತೆ, ೧೪.೧೨)*

ವಿಷಯವಾಸನೆಗಳನ್ನು ತ್ಯಾಗ ಮಾಡಿ ಭಗವಂತನಲ್ಲಿ ಭಕ್ತಿಯಿಂದ ತನ್ನನ್ನು ತಾನೇ ಸಮರ್ಪಿಸಿಕೊಳ್ಳಬೇಕು. ಭಗವಂತನು ಆ ಭಕ್ತನ ಹೃದಯದಲ್ಲಿ ವಿರಾಜಮಾನನಾಗುತ್ತಾನೆ. ಆಗ ಸಿಗುವ ಆನಂದ–ಸುಖ, ವಿಷಯಾಸಕ್ತ ವ್ಯಕ್ತಿಗಳ ಅನುಭವಕ್ಕೆ ಬರಲು ಸಾಧ್ಯವಿಲ್ಲ.

ಭಾಗವತದ ಹನ್ನೊಂದನೆ ಸ್ಕಂದ ಮತ್ತು ಇನ್ನಿತರ ಭಾಗಗಳಲ್ಲಿ ಕೆಲವು ಉಲ್ಲೇಖಗಳಿವೆ. ಇಲ್ಲಿ ಪ್ರಧಾನವಾಗಿ ಮೂರು ವಿಚಾರಗಳನ್ನು ಮನಸ್ಸಿನಲ್ಲಿಡಬೇಕಾಗಿದೆ: ೧) ಭಗವಂತನ ಚರಣಗಳಲ್ಲಿ ಕ್ರಮಶಃ ಅನುರಾಗವನ್ನು ವೃದ್ಧಿಸುವುದು. ೨) ಸಂಸಾರದ ಆಕರ್ಷಣೆಯನ್ನು ಕಡಿಮೆ ಮಾಡುವುದು ಮತ್ತು ೩) ಭಗವತ್ತತ್ತ್ವವು ಸ್ಪಷ್ಟವಾಗಿ ಅರಿವಿಗೆ ಬರುವುದು.

ಭಗವತ್ತತ್ತ್ವವನ್ನು ಚರ್ಚೆ ಮಾಡದಿದ್ದರೂ ಕೂಡ, ಭಗವಂತನ ಸ್ವರೂಪವು ತನ್ನಿಂದ ತಾನೇ ಒಳಗಿನಿಂದ ಪ್ರಕಾಶಿಸಿ ಸಂಶಯ ನಿವಾ ರಣೆಯಾಗುತ್ತದೆ. ಭಗವಂತನಿದ್ದಾನೆ ಮತ್ತು ಆತ ನಿತ್ಯ – ಈ ವಿಚಾರವು ಮನಸ್ಸಿನಲ್ಲಿ ಒಂದು ಸಲ ದೃಢವಾಗಿ ನಿಂತರೆ, ಆ ವ್ಯಕ್ತಿಯ ಜೀವನವೇ ಬದಲಾಗುತ್ತದೆ. ಶ್ರೀರಾಮಕೃಷ್ಣರು ದೃಷ್ಟಾಂತವಾಗಿ ಹೇಳುತ್ತಾರೆ – ಕಳ್ಳನೊಬ್ಬ ಕಳ್ಳತನ ಮಾಡಲು ಹೋಗಿದ್ದಾನೆ. ಪಕ್ಕದ ಮನೆಯಲ್ಲಿ ಬೇಕಾದಷ್ಟು ಚಿನ್ನ ಇದೆ ಎಂದು ಗೊತ್ತಾದರೆ, ಕಳ್ಳ ಸುಮ್ಮನಿರುತ್ತಾನೆಯೆ? ಅದನ್ನು ಕದಿಯಲು ಚಡಪಡಿಸುತ್ತಾನೆ. ಹೇಗಾ ದರೂ ಮಾಡಿ ಆ ಚಿನ್ನವನ್ನು ಲಪಟಾಯಿಸಬೇಕೆಂದು ಆತ ಎಲ್ಲ ತರದ ಪ್ರಯತ್ನವನ್ನು ಮಾಡುತ್ತಾನೆ. ಹಾಗೆಯೇ ಭಗವಂತನಿಗಾಗಿ, ಕಳ್ಳನ ಮನಸ್ಸಿನಲ್ಲಿದ್ದ ತೀವ್ರತೆಯ ಹಾಗೆ ವ್ಯಾಕುಲತೆ ಬೇಕು. ಆ ವ್ಯಾಕುಲತೆ ಬಂದಾಗ ಗುರಿ ಒಂದೇ ಒಂದು ಪರಮಾರ್ಥ – ಎಂದು ಮನಸ್ಸಿಗೆ ಬರುತ್ತದೆ.